UASB Library
Newspaper Clippings
TUESDAY 25.10.2022
Pg .1
Jai Kisan

Vijayavani Pg.01

ಕೃಷಿಗೆ ಕೋಲಾರ ಮಾಡೆಲ್

ಇಸ್ರೇಲ್‌ಗಿಂತ ರಾಜ್ಯದ ಯಶೋಗಾಥೆಗೆ ಕೃಷಿ ನೀತಿಯಲ್ಲಿ ಒತ್ತು

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ರೈತರು ಸ್ವಾವಲಂಬಿ ಜೀವನ ನಡೆಸಲು ಪೂರಕವಾಗಿ ಸರ್ಕಾರ ಕೋಲಾರ ಕೃಷಿ ಮಾದರಿಯಲ್ಲಿ ಹೊಸ ಕೃಷಿ ನೀತಿ ಜಾರಿಗೆ ತರಲು ಸಜ್ಜಾಗಿದೆ. ಆತ್ಮನಿರ್ಭರ ಭಾರತದ ಪರಿಕಲ್ಪನೆಯಲ್ಲಿ ರಾಜ್ಯದ ರೈತರ ಕಣ್ಮುಂದೆಯೇ ಇರುವ ಕೋಲಾರ ರೈತರನ್ನೇ ನೂತನ ಕೃಷಿ ನೀತಿಗೆ ಆಧಾರವನ್ನಾಗಿ ಮಾಡಿಕೊಳ್ಳಲಾಗುತ್ತಿದೆ.

ವಿಜಯವಾಣಿ ನಡೆಸಿದ ಸಂವಾದದಲ್ಲಿ ಕೃಷಿ ಸಚಿವ ಬಿ.ಸಿ. ಪಾಟೀಲ್ ನೂತನ ಕೃಷಿ ನೀತಿ ತರುವ ಕುರಿತು ಮಾಹಿತಿ ಹಂಚಿಕೊಂಡರು.

ದೂರದ ಇಸ್ರೇಲ್ ಮಾದರಿಗಿಂತ ರಾಜ್ಯದಲ್ಲೇ ಯಶೋಗಾಥೆಗಳ ಸರಮಾಲೆ ಇರುವ ಕೋಲಾರ ಕೃಷಿಕರ ಬದುಕು, ಕೃಷಿ ಪದ್ಧತಿಗಳೇ ಹೊಸ ಕೃಷಿ ನೀತಿಯ ಜೀವಾಳವಾಗಲಿವೆ.

» ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾಹಿತಿ

ರೈತರ ಆರ್ಥಿಕ ಸ್ಥಿತಿ ಸುಧಾರಣೆಗೆ ಹಲವು ಹತ್ತು ಉಪಕ್ರಮಗಳನ್ನು ಜಾರಿಗೊಳಿಸಿರುವ ಸರ್ಕಾರ ನೂತನ ಕೃಷಿ ನೀತಿ ಮೂಲಕ ರೈತನಿಗೆ ಬೆನ್ನೆಲುಬಾಗಿ ನಿಲ್ಲಲು ಮುಂದಾಗಿದೆ ಎಂದರು.

ಅತಿವೃಷ್ಟಿ, ಅನಾವೃಷ್ಟಿ ಸೇರಿದಂತೆ ಪ್ರಾಕೃತಿಕ ವೈಪರೀತ್ಯಗಳ ಜತೆಗೆ ಸೆಣಸಾಡಿ ದೇಶಕ್ಕೆ ಅನ್ನ ನೀಡುತ್ತಿರುವ ರೈತನ ಬದುಕಿನ ಕ್ಷಿತಿಜವನ್ನು ಇನ್ನಷ್ಟು ವಿಸ್ತಾರಗೊಳಿಸುವ ಮಹತ್ವಾಕಾಂಕ್ಷೆಯಲ್ಲಿ ಈ ನೀತಿ ನಿರೂಪಣೆಯಾಗುತ್ತಿದೆ. ಮುಂದಿನ ಕೆಲ ದಿನಗಳಲ್ಲಿ ಸಚಿವ ಸಂಪುಟದಲ್ಲಿ ಮಂಡನೆಯಾಗಲಿದೆ. ಕೃಷಿಯನ್ನು ಖುಷಿಯಾಗಿ ಮಾಡಬೇಕು. ಕೃಷಿ ಉದ್ಯಮವಾಗಬೇಕು ಎಂಬ ನಿಟ್ಟಿನಲ್ಲಿ ಮೌಲ್ಯವರ್ಧನೆ, ಸಂಸ್ಕರಣೆ, ಉಪ ಉತ್ಪನ್ನ ತಯಾರಿಕೆಗೆ ಪೂರಕವಾಗಿ ಈ ನೀತಿ ಅಂಕುರಿಸಲಿದೆ. ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಂಡು ಏಕಕಾಲದಲ್ಲಿ ಬಹು ವಿಧದ ಬೆಳೆ ಬೆಳೆಯುವ ಮೂಲಕ ರೈತನನ್ನು ಸ್ವಾವಲಂಬಿಯಾಗಿಸುವುದು ನೂತನ ನೀತಿಯ ಸಂಕಲ್ಪವಾಗಿದೆ ಎಂದು ವಿವರಿಸಿದರು.



ವಿ ಸಂವಾದ

ಅಧ್ಯಯನ ಪ್ರಯೋಗದ ಫಲ

ನನ್ನ ಕ್ಷೇತ್ರದ ಪ್ರಗತಿಪರ ರೈತರ ತಂಡವನ್ನು ಕೋಲಾರಕ್ಕೆ ಕಳುಹಿಸಿಕೊಟ್ಟು ಮಾದರಿಗಳನ್ನು ತೋರಿಸಿದ್ದೇನೆ. ಅಧ್ಯಯನವನ್ನೂ ಮಾಡಿಸಿದ್ದೇನೆ. ಇದರಿಂದ ರೈತರಿಗೆ ಸಾಕಷ್ಟು ಲಾಭವಾಗಿದೆ. ಹೀಗಾಗಿ ಕೋಲಾರವೇ ನಮ್ಮ ನೂತನ ಕೃಷಿ ನೀತಿಗೆ ಭೂಮಿಕೆಯಾಗಲಿದೆ ಎಂದು ಪಾಟೀಲ್ ಹೇಳಿದರು.

ಉಪ ಕಸುಬುಗಳು ಸಮಗ್ರ ಕೃಷಿಗೆ ಒತ್ತು

ಕೋಲಾರ ಜಿಲ್ಲೆಯ ರೈತರು ರಾಜ್ಯದ ರೈತರಿಗೆ ಮಾದರಿಯಾಗಬೇಕು. ಸಾವಿರಾರು ಅಡಿ ಆಳ ಕೊರೆದರೂ ನೀರು ಸಿಗದ ಪ್ರದೇಶದಲ್ಲಿ ಹನಿ ನೀರನ್ನೂ ಕಾಪಾಡುತ್ತಾರೆ. ಏಕ ಬೆಳೆ ಪದ್ಧತಿಗಿಂತ ಬಹು ಬೆಳೆ ಹಾಗೂ ಉಪ ಕಸುಬುಗಳನ್ನು ಅಳವಡಿಸಿಕೊಂಡು ಕೃಷಿಯನ್ನು ಲಾಭದಾಯವಾಗಿಸಿಕೊಂಡಿದ್ದಾರೆ. ಸ್ವಾವಲಂಬಿ ಹಾಗೂ ಸ್ವಾಭಿಮಾನದ ಬದುಕು ಬಾಳಬಹುದೆಂದು ತೋರಿಸಿದ್ದಾರೆ ಎನ್ನುತ್ತಾರೆ ಪಾಟೀಲ್.

ಐದು ಸಿರಿಧಾನ್ಯ ಹಬ್

ಸಿರಿಧಾನ್ಯ ಕೃಷಿ ಪ್ರೋತ್ಸಾಹಿಸಲು 'ರೈತ ಸಿರಿ' ಯೋಜನೆ ಜಾರಿಗೊಳಿಸಲಾಗಿದೆ. ಕೆಪೆಕ್ ಸಂಸ್ಥೆಯನ್ನು ಸಂಪರ್ಕ ಸೇತು ಮಾಡಿಕೊಂಡು ಸಿರಿಧಾನ್ಯ ರಫ್ತಿಗೆ ಯೋಜನೆ ರೂಪಿಸಲಾಗುತ್ತಿದೆ. ಈ ಮೊದಲು ಆಹಾರ ಭದ್ರತೆ ಮುಖ್ಯವಾಗಿತ್ತು. ಈಗ ಪೌಷ್ಟಿಕಾಂಶ ಭದ್ರತೆ ಖಾತ್ರಿಪಡಿಸಬೇಕಾದ ಜವಾಬ್ದಾರಿ ಸರ್ಕಾರದ ಮೇಲಿದೆ. ಹೀಗಾಗಿ ಸಿರಿಧಾನ್ಯ ಬೆಳೆ, ಮಾರುಕಟ್ಟೆ, ರಫ್ತಿಗೆ ಸರ್ಕಾರ ಆದ್ಯತೆ ನೀಡುತ್ತಿದೆ. ಹಾವೇರಿ, ವಿಜಯಪುರ, ಬನವಾಸಿ, ಚಿಕ್ಕಬಳ್ಳಾಪುರ, ಮೈಸೂರನ್ನು ಸಿರಿಧಾನ್ಯ ಹಬ್‌ಗಳನ್ನಾಗಿ ಗುರುತಿಸಲಾಗಿದೆ. ಅಲ್ಲದೆ, ಈ ಬೆಳೆಗಾರರಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಲು ವಿಶೇಷ ಯೋಜನೆಯನ್ನೂ ರೂಪಿಸಲಾಗುವುದು. ಸಿರಿಧಾನ್ಯ ಬೆಳೆಯುವುದರ ಜತೆಗೆ ಅವುಗಳ ಸಂಸ್ಕರಣೆ, ಮೌಲ್ಯವರ್ಧನೆ, ಬ್ರ್ಯಾಂಡಿಂಗ್ ಮಾಡಲು ರೈತರಿಗೆ ಪೂರಕ ತರಬೇತಿ, ಪ್ರೋತ್ಸಾಹ ನೀಡಲಾಗುವುದು ಎಂದು ಕೃಷಿ ಸಚಿವ ಬಿ.ಸಿ. ಪಾಟೀಲ್ ವಿವರಿಸಿದರು.

ಇಲಾಖೆಯ ಎಲ್ಲ ಹುದ್ದೆಗಳ ನೇಮಕಕ್ಕೆ ಪ್ರಸ್ತಾವನೆ 011

ಸಿಗಡಿ ಕೃಷಿ ₹33 ಲಕ್ಷ ಆದಾಯ

ರೈತರಿಗೆ ಹೆಚ್ಚು ಆದಾಯ ತಂದುಕೊಡುವ ಉಪಕೃಷಿಗಳಲ್ಲಿ ಮೀನು ಕೃಷಿ ಕೂಡ ಒಂದು. ಅದರಲ್ಲಿ ಸಿಗಡಿ ಕೃಷಿ ರೈತರ ಜೇಬು ತುಂಬುವುದರಲ್ಲಿ ಯಾವುದೇ ಅನುಮಾನವಿಲ್ಲ. ಕೇವಲ 1 ಹೇಕ್ಟರ್ ಪ್ರದೇಶದಲ್ಲಿ 30 ರಿಂದ 33 ಲಕ್ಷ ರೂ. ಆದಾಯ ಗಳಿಸಬಹುದು. ಇದು ಸಿಗಡಿ ಕೃಷಿಯ ಸಾಮರ್ಥ್ಯ. ಪ್ರಾನ್ಸ್ ಫಾರ್ಮಿಂಗ್ ಅನ್ನು ಕನ್ನಡದಲ್ಲಿ ಸಿಗಡಿ ಕೃಷಿ ಎನ್ನಲಾಗುತ್ತದೆ. ಸಿಗಡಿ ಅತೀ ಹೆಚ್ಚು ಬೇಡಿಕೆ ಇರುವ ಹಾಗೂ ಲಾಭ ಕೊಡುವ ಮೀನಿನ ತಳಿ. ಈಗಾಗಲೆ ದೇಶದ ಹಲವು ರಾಜ್ಯಗಳಲ್ಲಿ ರೈತರು ಸಿಗಡಿ ಕೃಷಿ ಮಾಡಿ ಲಾಭ ಗಳಿಸುತ್ತಿದ್ದಾರೆ. ರೈತರಿಗೆ ಇಷ್ಟು ಪೂರಕವಾಗಿರುವ ಈ ಕೃಷಿ ಮಾಡಿದರೆ ಯಶಸ್ಸು ಗ್ಯಾರಂಟಿ.

ಸಿಗಡಿ ಮಾರುಕಟ್ಟೆ ಮೌಲ್ಯ: ಹೆಚ್ಚು ಆದಾಯ ತಂದು ಕೊಡುವ ಸಿಗಡಿಗೆ ಜಾಗತಿಕ ಬೇಡಿಕೆ ನೋಡುವುದಾದರೆ ಪ್ರತಿಯೊಬ್ಬರು ಅಶ್ಚರ್ಯ ಪಡುವಂತಿದೆ. ಯಾಕೆಂದರೆ ಇದೇ ವರ್ಷ 30.64 ಬಿಲಿಯನ್ ಡಾಲರ್ ಅಂದ್ರೆ ಭಾರತೀಯ ರೂಪಾಯಿ ಮೌಲ್ಯ 2.5 ಲಕ್ಷ ಕೋಟಿ ಇದೆ. ಇದು 2028ಕ್ಕೆ 74.28 ಬಿಲಿಯನ್ ಡಾಲರ್ ಅಂದ್ರೆ ಭಾರತೀಯ ರೂಪಾಯಿ ಮೌಲ್ಯ 6 ಲಕ್ಷ ಕೋಟಿ ಆಗುವ ನಿರೀಕ್ಷೆ ಇದೆ. ಅಷ್ಟು ವೇಗವಾಗಿ ಸಿಗಡಿ ಮಾರುಕಟ್ಟೆ ಬೆಳೆಯುತ್ತಿದೆ. ಇನ್ನು ನಮ್ಮ ದೇಶದ ವಿಚಾರಕ್ಕೆ ಬಂದರೆ ಸಿಗಡಿ ಕೃಷಿ ಹಿಂದೆ ಬಿದ್ದಿಲ್ಲ. ಕಳೆದ ವರ್ಷ 2021ರಲ್ಲಿ 6.5 ಬಿಲಿಯನ್ ಡಾಲರ್ ಅಂದ್ರೆ ಸುಮಾರು 53 ಸಾವಿರ ಕೋಟಿ ಇದ್ದಂಥ ಮಾರುಕಟ್ಟೆ 2027ಕ್ಕೆ 12.7 ಬಿಲಿಯನ್ ಡಾಲರ್ ಆಗಲಿದೆ. ರೂಪಾಯಿ ಲೆಕ್ಕದಲ್ಲಿ ಹೇಳುವುದಾದರೆ 1 ಲಕ್ಷ ಕೋಟಿ ರೂ. ಅಷ್ಟು ಹೆಚ್ಚಾಗಲಿದೆ ಎಂದು ನಿರೀಕ್ಷೆ ಮಾಡಲಾಗಿದೆ. ಇನ್ನು ನಮ್ಮ ದೇಶದಲ್ಲಿ ಸಿಗಡಿ ಕೃಷಿಯಲ್ಲಿ ಆಂಧ್ರಪ್ರದೇಶ ಮೊದಲ ಸ್ಥಾನದಲ್ಲಿ ಇದೆ. ಉಳಿದಂತೆ ಗುಜರಾತ್, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ಸೇರಿ ಇತರ ರಾಜ್ಯಗಳಲ್ಲಿ ಪ್ರಾನ್ಸ್ ಫಾರ್ಮಿಂಗ್ ಅನ್ನು ರೈತರು ಯಶಸ್ವಿಯಾಗಿ ಮಾಡುತ್ತಿದ್ದಾರೆ.

ಸಿಗಡಿಗೆ ಬೇಡಿಕೆ ಏಕೆ?: ಮೀನು ಸಾಕಣೆಯಲ್ಲಿ ಸಿಗಡಿ ಕೃಷಿ ಮಹತ್ವದ ಸ್ಥಾನ ಪಡೆದುಕೊಂಡಿದೆ. ಸಿಗಡಿಯಲ್ಲಿ ಇಳುವರಿ ಶೀಘ್ರವಾಗಿ ದೊರೆಯುತ್ತದೆ. ಜತೆಗೆ ಸಿಗಡಿ ತಿನ್ನುವುದರಿಂದ ನಮ್ಮಲ್ಲಿ ರೋಗನಿರೋಧಕ ಶಕ್ತಿಯೂ ಹೆಚ್ಚುತ್ತೆ. ಈ ಎಲ್ಲ ಕಾರಣಗಳಿಂದ ಸಿಗಡಿಗೆ ದಿನದಿಂದ ದಿನಕ್ಕೆ ಡಿಮಾಂಡ್ ಹೆಚ್ಚುತ್ತಿದೆ.

ಸಿಗಡಿ ಕೃಷಿಗೆ ಅಗತ್ಯತೆ: ಸಿಗಡಿಯಲ್ಲಿ ಪ್ರಮುಖವಾಗಿ ಎರಡು ವಿಧಗಳನ್ನು ಕಾಣಬಹುದು ಒಂದು ಟೈಗಾರ್. ಇದು ಕಳೆದ ಕೆಲವು ವರ್ಷಗಳಿಂದ ಕೃಷಿ ಕಾರ್ಯದಿಂದ ದೂರವಾಗಿದೆ. ಪ್ರಸ್ತುತ ವೆನಾಮಿ ತಳಿ ಹೆಚ್ಚು ಬಳಕೆಯಾಗುತ್ತಿದ್ದು, ಎಲ್ಲ ಕಡೆ ಈ ತಳಿಯನ್ನೇ ಕೃಷಿ ಮಾಡಲಾಗುತ್ತಿದೆ. ಸಿಗಡಿ ಕೃಷಿಯನ್ನು ಪ್ರತಿ ಪ್ರದೇಶದಲ್ಲಿಯೂ ಮಾಡಬಹುದು. ಕೃಷಿ ಮಾಡುವ ಪ್ರದೇಶದಲ್ಲಿ ರಸ್ತೆ ಸಂಪರ್ಕ, ನೀರು ಬಹಳ ಮುಖ್ಯವಾಗಿರುತ್ತದೆ. ಇನ್ನು 1 ಹೆಕ್ಟೇರ್ ಪ್ರದೇಶದಲ್ಲಿ 10 ಅಡಿ ಆಳದ ಪಾಂಡ್ ಮಾಡಿ ಅದರಲ್ಲಿ 5 ಪಿಎಲ್ (5 ದಿನದ) ನಿಂದ 10 ಪಿಎಲ್(10 ದಿನ)ದೊಳಗಿನ ಮರಿಗಳನ್ನು ಬಿಡಬೇಕು. ಬಹಳ ಮುಖ್ಯವಾಗಿ ಸಿಗಡಿಗೆ ಆಕ್ಸಿಜನ್ ನಿರಂತರ ಅಗತ್ಯವಿರುವುದರಿಂದ ವೇರಿಯೇಟರ್‌ಗಳನ್ನು ಜೋಡಿಸಬೇಕು. ನೀರಿನ ಪಿಎಚ್ ವ್ಯಾಲ್ಯು 7.5 ರಿಂದ 8.5 ಇರುವಂತೆ ನೋಡಿಕೊಂಡರೆ ಸಾಕು.

ಸಿಗಡಿ ಕೃಷಿ ಲೆಕ್ಕಚಾರ ಪ್ರತಿ ಹೇಕ್ಟರ್‌ಗೆ: ಸಿಗಡಿ ಕೃಷಿಗೆ ಇರುವ ಬೇಡಿಕೆ ನೋಡಿದಾಗ ಎಷ್ಟು ಗಳಿಸಬಹುದು ಎಂಬ ಪ್ರಶ್ನೆ ಮಾಡುತ್ತದೆ. ಸರಾಸರಿ ಕೆ.ಜಿ. ಸಿಗಡಿಗೆ 350 ರೂ. ಬೆಲೆ ತೆಗೆದುಕೊಂಡರೂ 1 ಹೆಕ್ಟೇರ್‌ಗೆ ವರ್ಷಕ್ಕೆ 33 ಲಕ್ಷ ರೂ. ಗಳಿಸಬಹುದು. ಇದು ಅಚ್ಚರಿ ಅನಿಸಿದರೂ ಸತ್ಯ.

1 ಹೆಕ್ಟೇರ್ ಪ್ರದೇಶದಲ್ಲಿ 10 ಅಡಿ ಆಳದ 1 ಪಾಂಡ್ ನಿರ್ಮಾಣ ಮಾಡಬೇಕು. ಇದಕ್ಕೆ ನಿಮಗೆ ತಗಲುವ ಖರ್ಚು 12.5 ಲಕ್ಷ ರೂ. ಇದು ಒಂದು ಟೈಮ್ ಬಂಡವಾಳ ಮಾತ್ರ. ಪ್ರತಿ ಕ್ರಾಫ್‌ಗೆ 8 ಲಕ್ಷದಂತೆ ವರ್ಷಕ್ಕೆ 16 ಲಕ್ಷ ರೂ. ನಿರಂತರ ಬಂಡವಾಳ ಅಗತ್ಯವಾಗುತ್ತದೆ. ಎಲ್ಲ ಖರ್ಚು ಸೇರಿ 1 ಪಾಂಡ್‌ಗೆ 28.5 ಲಕ್ಷ ರೂ. ಖರ್ಚಾಗುತ್ತದೆ. ಇದು ಮೊದಲ ವರ್ಷದಲ್ಲಿ. ಇಷ್ಟೆಲ್ಲ ಖರ್ಚು ಮಾಡಿದ ಬಳಿಕ ಇಳುವರಿ ಎಷ್ಟು ಎಂಬ ಪ್ರಶ್ನೆ ಮೂಡುತ್ತದೆ. 1 ಪಾಂಡ್‌ನಲ್ಲಿ ಪ್ರತಿ ಕ್ರಾಫ್‌ಗೆ 5 ಟನ್ ಅಂತ ವರ್ಷಕ್ಕೆ 2 ಕ್ರಾಫ್ ಅಂದ್ರು 10 ಟನ್ ಇಳುವರಿ ಪಡೆದುಕೊಳ್ಳಬಹುದು. ಇಲ್ಲಿ ಸಿಗಡಿಯನ್ನು ಕೌಂಟಿಂಗ್ ಅಳತೆಯಲ್ಲಿ ಪ್ರತಿ ಕ್ರಾಫ್ಟ್‌ನಲ್ಲಿ 3 ಹಂತದಲ್ಲಿ ಕಟಾವು ಮಾಡಲಾಗುತ್ತದೆ. ಒಟ್ಟು ವರ್ಷಕ್ಕೆ 10 ಟನ್‌ಗೆ ಆದಾಯ ಸರಿ ಸುಮಾರು 33 ಲಕ್ಷ ರೂ. ಇದರಲ್ಲಿ 28.5 ಲಕ್ಷ ರೂ. ತೆಗೆದರೆ ಮೊದಲ ವರ್ಷ 4.5 ಲಕ್ಷ ರೂ. ಲಾಭ ದೊರೆಯುತ್ತದೆ. ಸರ್ಕಾರದ ಸಬ್ಸಿಡಿ ಪಡೆದುಕೊಂಡರೆ ಲಾಭಾಂಶ ಹೆಚ್ಚು ಸಿಗುತ್ತದೆ. ಇನ್ನು 2 ನೇ ವರ್ಷದಿಂದ ಒನ್ ಟೈಮ್ ಇನ್ವೆಸ್ಟ್‌ಮೆಂಟ್ 12.5 ಲಕ್ಷ ರೂ. ಇರೋದಿಲ್ಲ. ಹಾಗಾಗಿ ಲಾಭ 17 ಲಕ್ಷ ರೂ. ಗಳನ್ನು ನಿರಂತರ ಲಾಭವಾಗಿ ಪಡೆದುಕೊಳ್ಳಬಹುದು. ಇದನ್ನೇ ದೊಡ್ಡಮಟ್ಟದಲ್ಲಿ ಮಾಡಿದರೆ ಎಷ್ಟು ಆದಾಯ ಗಳಿಸಬಹುದು ಲೆಕ್ಕ ಹಾಕಿ.

ಅನುಮತಿ ಮತ್ತು ಸಬ್ಸಿಡಿ: ಸಿಗಡಿ ಕೃಷಿ ಮಾಡುವುದಕ್ಕೆ ಮೀನುಗಾರಿಕೆ ಇಲಾಖೆಯಿಂದ ಅನುಮತಿ ತೆಗೆದುಕೊಳ್ಳುವುದು ಅಗತ್ಯ. ಈ ಕೃಷಿಗೆ ಸಬ್ಸಿಡಿ ಸಹ ಸಾಮಾನ್ಯವರ್ಗದವರಿಗೆ ಶೇ.40 ಹಾಗೂ ಪರಿಶಿಷ್ಟ ಜಾತಿ, ಪಂಗಡ ಮತ್ತು ಮಹಿಳೆಯರಿಗೆ ಶೇ.60 ಸಬ್ಸಿಡಿ ದೊರೆಯುತ್ತೆ. ಇಷ್ಟೇ ಅಲ್ಲದೆ, ಎಕರೆಗೆ 2 ಲಕ್ಷ ರೂ.ನಂತೆ ಬ್ಯಾಂಕ್‌ಗಳು ಶೇ.7 ರಿಂದ 8 ಬಡ್ಡಿ ದರದಲ್ಲಿ ಸಾಲ ನೀಡುತ್ತವೆ.

ffreedom app ನಲ್ಲಿ ಸಿಗಡಿ ಕೃಷಿ ಕೋರ್ಸ್: ಪ್ರತಿಯೊಬ್ಬರು ಆರ್ಥಿಕ ಸ್ವಾತಂತ್ರ್ಯ ಕಂಡುಕೊಳ್ಳಬೇಕು ಎಂಬ ಉದ್ದೇಶ ಹೊಂದಿರುವ ffreedom app ಸಿಗಡಿ ಕೃಷಿ ಬಗ್ಗೆ ಸಂಪೂರ್ಣ ಮಾಹಿತಿ ಒಳಗೊಂಡ ಕೋರ್ಸ್ appನಲ್ಲಿ ಅನಾವರಣ ಮಾಡಿದೆ. ಇಲ್ಲಿ ಸುಮಾರು 150 ಎಕರೆ ಪದೇಶದಲ್ಲಿ ಸಿಗಡಿ ಕೃಷಿ ಮಾಡಿ ಉತ್ತಮ ಆದಾಯ ಗಳಿಸುತ್ತಿರುವ, ಸಿಗಡಿ ಕೃಷಿ ಸಾಧನೆಗೆ ffrreedom ಅವಾರ್ಡ್ಸ್ ಪಡೆದಿರುವ ರಾಯಚೂರಿನ ಶ್ರೀನಿವಾಸ್ ರಾವ್ ಮಾರ್ಗದರ್ಶನ ನೀಡುತ್ತಾರೆ.


ಮನಿ ಮಾತು
ಆಪ್ತ ಸಲಹೆ
ಸಿ ಎಸ್ ಸುಧೀರ್
ಸಿಇಒ, ಸಂಸ್ಥಾಪಕರು ಫ್ರೀಡಂ ಆ್ಯಪ್
@ ffreedom.com



ಕೋರ್ಸ್‌ನಲ್ಲಿ ಏನೇನು ಕಲಿಯಬಹುದು?

- ಕೋರ್ಸ್ ಮತ್ತು ಮಾರ್ಗದರ್ಶಕರ ಪರಿಚಯ
- ಸಿಗಡಿ ಕೃಷಿಯ ವಿಧಗಳು
- ಸೌಕರ್ಯಗಳು
- ಬಂಡವಾಳ ಮತ್ತು ಸರ್ಕಾರದ ಸೌಲಭ್ಯ
- ಪಾಂಡ್ ನಿರ್ಮಾಣ, ಅಗತ್ಯ ಸಲಕರಣೆಗಳು
- ತಳಿ ಆಯ್ಕೆ ಮತ್ತು ಆರೈಕೆ
- ಆಹಾರ, ಆಕ್ಸಿಜನ್, ಕಾರ್ಮಿಕರು ಮತ್ತು ರೋಗ ನಿಯಂತ್ರಣ
- ಕಟಾವು ಮತ್ತು ನಂತರದ ಪ್ರಕ್ರಿಯೆ
- ಬೇಡಿಕೆ, ಮಾರಾಟ ಮತ್ತು ಮಾರ್ಕೆಟಿಂಗ್
- ಆದಾಯ, ಖರ್ಚು ಮತ್ತು ಲಾಭ
- ಸವಾಲುಗಳು ಮತ್ತು ಕಿವಿಮಾತು

ಉದ್ಯೋಗಾವಕಾಶ

ಮನೆಯಿಂದಲೇ ಉದ್ಯೋಗ ಮಾಡಬಯಸುವವರಿಗೆ ffreedom appನಲ್ಲಿ ಸುವರ್ಣ ಅವಕಾಶವಿದೆ. ಉದ್ಯೋಗಾಕಾಂಕ್ಷಿಗಳು ಈ ನಂಬರಿಗೆ ಮಿಸ್ಡ್ ಕಾಲ್ ಮಾಡಿ - 02262116777

Vijayavani Pg.04

ಎಲೆಚುಕ್ಕಿ ರೋಗ ಅಧ್ಯಯನ ಸಮಿತಿ

ಬೆಂಗಳೂರು: ಅಡಕೆಗೆ ಕಾಣಿಸಿಕೊಂಡಿರುವ ಎಲೆ ಹಳದಿ ರೋಗ ಹಾಗೂ ಎಲೆಚುಕ್ಕಿ ರೋಗದ ಬಗ್ಗೆ ಅಧ್ಯಯನ ನಡೆಸಿ, ಪರಿಹಾರ ಸೂಚಿಸಲು ತಜ್ಞರ ಸಮಿತಿಯನ್ನು ಕೇಂದ್ರ ಸರ್ಕಾರ ನೇಮಿಸಿದೆ. ರೋಗದ ಹಾವಳಿಗೆ ಕಾರಣ, ಕ್ರಿಮಿನಾಶಕದಿಂದಲೂ ನಿಯಂತ್ರಣಕ್ಕೆ ಬಾರದಿರುವುದು ಸೇರಿ ಎಲ್ಲ ಕೋನಗಳಲ್ಲಿ ಅಧ್ಯಯನ ನಡೆಸಿ, ಪರಿಹಾರ ಮಾರ್ಗದ ಕಾರ್ಯತಂತ್ರ ರೂಪಿಸಿಕೊಡುವುದು ಈ ಸಮಿತಿ ಜವಾಬ್ದಾರಿಯಾಗಿದೆ. ಕಾಸರಗೋಡಿನ ಕೇಂದ್ರೀಯ ತೋಟಗಾರಿಕೆ ಬೆಳೆಗಳ ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ.ಅನಿತಾ ಕರುಣ್ ಸೇರಿ ಎಂಟು ತಜ್ಞರು ಹಾಗೂ ಒಬ್ಬ ಸದಸ್ಯ ಕಾರ್ಯದರ್ಶಿ ತಂಡದಲ್ಲಿದ್ದಾರೆ. ಶಿವಮೊಗ್ಗ, ಚಿಕ್ಕಮಗಳೂರು ಸೇರಿ ಐದಾರು ಜಿಲ್ಲೆಗಳ 20 ಸಾವಿರ ಹೆಕ್ಟೇರ್ ಪ್ರದೇಶದ ಅಡಿಕೆ ತೋಟಗಳಲ್ಲಿ ಈ ರೋಗ ಕಾಣಿಸಿಕೊಂಡಿದೆ.

» ಸಿಪಿಸಿಆರ್‌ಐ ನಿರ್ದೇಶಕಿ ಡಾ.ಅನಿತಾ ಕರುಣ್ ನೇತೃತ್ವ

Vijayavani Pg.01



ಕೃಷಿಗೆ ಒತ್ತು ಎಲ್ಲ ಹುದ್ದೆಗಳ ಭರ್ತಿಗೆ ಪ್ರಸ್ತಾವನೆ

ಸಂ. 1 ಕನ್ನಡ ದಿನಪತ್ರಿಕೆ
ವಿಜಯವಾಣಿ
VIJAYAVANI BENGALURU
ಮಂಗಳವಾರ 25 ಅಕ್ಟೋಬರ್ 2022
25 OCTOBER 2022
11
ಸಮಸ್ತ ಕರ್ನಾಟಕ

ವಿ ಸಂವಾದ

ಕೃಷಿ ವಿಜ್ಞಾನಿಗಳ ಕ್ಷೇತ್ರ ಕಾರ್ಯ ಕಡ್ಡಾಯ

ಸರ ವಿ.ಸಿ.ಪಾಟೀಲ್ ಮಾಹಿತಿ

ಕ್ಷೇತ್ರ ಕಾರ್ಯ ಕಡ್ಡಾಯ

ಸಿರಿಧಾನ್ಯ ಮೇಳದಿಂದ ವ್ಯಾಪಕ ನಿರೀಕ್ಷೆ

ಕಟಾವು ಮಾನದಂಡ ಬದಲಾವಣೆಗೆ ಮನವಿ

ಬರಲಿದೆ ನ್ಯಾನೋ ಡಿಎಪಿ

ರಾಜೀನಾಮೆ ಸವಾಲು

ಕಣ್ಣಮುಂದಿನ ಮಾದರಿ

ಇತರ ಅಂಶಗಳು

ತಾತ್ಕಾರಕ್ಕೆ ಬೇಸರ...

ವೈಜ್ಞಾನಿಕ ಬೆಲೆ ನಿಶ್ಚಿತ

ಡ್ರೋನ್ ಬಳಕೆಯಿಂದ ನಿಗದಿಲಿದೆ ಸಮಸ್ಯೆ

Vijayavani Pg.11

ಬಾಳೆ ಎಲೆಯನ್ನು ಸಂರಕ್ಷಿಸಿಡುವಂತಹ ತಂತ್ರಜ್ಞಾನವನ್ನು ತಮಿಳುನಾಡಿನ ಯುವಕ ಕಂಡುಹಿಡಿದಿದ್ದಾರೆ.

ಎಲ್.ಪಿ. ಕುಲಕರ್ಣಿ
ಟೆಕ್ ಸೈನ್ಸ್





ಬಾಳೆ ಎಲೆ ತಂತ್ರಜ್ಞಾನ!



Vishwavani Pg.02

Prajavani Pg.08

ನಿರಂತರ ಮಳೆಯಿಂದಾಗಿ ಕಾಫಿ ಬೆಳೆಗಾರರಿಗೆ ಸಂಕಷ್ಟ

ಹಣ್ಣಾದ ಕಾಫಿಬೀಜ ಮಣ್ಣು ಪಾಲು

• ಲೋಕೇಶ್. ಡಿ.ಪಿ



ಕಾಫಿಬೆಳೆ ಕೊಯ್ಲು ಮಾಡುತ್ತಿರುವ ಕಾರ್ಮಿಕ ಮಹಿಳೆ

Prajavani Pg.08

CLIMATE CRISIS

Fossil fuel profits can easily cover climate losses, report says

BLOOMBERG

Rich nations could cover the climate-induced economic losses suffered by the world's most vulnerable countries if they forced the fossil fuel industry to pay for the damage caused by their emissions, according to Oxfam International.

The profit from six large oil companies in the first half of 2022 was enough to offset the financial impacts of global-warming-fueled extreme weather events in low-income countries over the same period, with $70 billion left over, a new report from the nonprofit said. Economic losses in the 55 most climate-vulnerable countries have totaled more than half a trillion dollars over the past two decades, yet the fossil fuel industry's profits were enough to counterbalance that almost 60 times over, the report said.

"It is an injustice that polluters who are disproportionately responsible for the escalating greenhouse gas emissions continue to reap these enormous profits while climate-vulnerable countries are left to foot the bill for the climate impacts destroying people's lives, homes and jobs," said Lyndsay Walsh, Oxfam's climate policy adviser and co-author of the report. "We must end this delay."

Recent flooding in Pakistan has thrust the issue of "loss and damage" into the spotlight, with just two weeks to go before the COP27 summit in Sharm El Sheikh. The jargon refers to the loss of lives, cultures or species that can never return and the damage to vital infrastructure that needs to be repaired after climate disasters. Rich countries generally oppose the creation of a facility that could leave them on the hook for billions of dollars due to their historic emissions.



The Oxfam report breaks down various arguments used by wealthy nations to delay for over three decades the creation of a loss and damage facility that is expected to become a major source of debate over the two-week conference in Egypt. It says the assertion that the costs could be too high is one of the "most insidious discourses of all," highlighting recent mobilisations of money to cushion the damage wrought by the Covid-19 pandemic. Moreover, the report says there are a number of ways for rich countries to source the finance outside existing budgets, such as a climate damages tax on polluters or an air passenger levy on flights.

A loss and damage fund would, for example, allow Pakistan to access grants, rather than loans from sources like the International Monetary Fund. The country's debt risks have been rising since the floods. Oxfam said in a report last week that money provided for climate mitigation and adaptation is already subject to "misleading" claims by rich countries, raising questions over its quality.

An average of 189 million people per year have been affected by extreme weather events in low-income countries since 1991 when a mechanism for loss and damage was first proposed, the report said. Over the same time period developing nations have experienced 79% of recorded deaths from such incidents.

DeccanHerald Pg.11

Agritech, an inclusive space for women

SPARSH KAUR

Agriculture has always been the foundation of the Indian economy. It still holds a prominent position in the country's economic engine. With the rapid advancement of agricultural technology and innovation, the nation is waking up to a new era — "agriculture 4.0".

However, this technological revolution is also heralding a massive shift in gender roles. The agritech sector is leading the way for women to become a part of the ongoing agricultural revolution by laying down the groundwork for gender-smart new-age solutions that are flexible and inclusive.

Women have always been an essential part of the agricultural workforce but a number of sociological and economic hurdles have hitherto restricted their roles, thus, limiting their responsibilities and opportunities. However, technological interventions can help in overcoming these challenges and spur the formation of gender-inclusive frameworks that can encourage the participation of women in the agritech workforce.

The agricultural sector offers enormous prospects for women professionals, across verticals like processing, sales, marketing and other post-harvest domains. It also has the potential to increase the female workers' participation rate across rural and urban India.

The agritech sector also offers immense scope for women to traverse into managerial and leadership roles in agriculture, especially in the post-harvest space. With a slew of appropriate policies and programmes being enacted into action, India is witnessing the rise of a digitalised agricultural vista that is heralding a new dawn of economic empowerment and social upliftment for countless women.

The biggest challenge is forging a culture in which every employee feels welcome and included irrespective of their gender and social standing. By aggressively hiring talent from across the lengths of the country and extending opportunities to daughters of farmers to join the agritech community, agriculture technology is also introducing them to various deep tech technologies which they otherwise might not get a chance to access.

By fostering an environment that values talent, abhors discrimination and provides a secure place for people to rise in their professional careers, we are increasing our productivity levels with each passing minute by tapping a diversity of talent from across the country.

Here are some key takeaways that all aspiring and established HR leaders must take into perspective:

- There is an urgent need to break away from the shackles of primitive



HR conventions and embrace the modern rules of the game.
- With old principles being cast out, it is necessary to adopt contemporary HR practices to stay ahead of the game.
- This means HR professionals must be cognizant of the evolving workplace dynamics and should respond accordingly. Taking into account the changing industrial scenery, it is essential to inculcate novel HR tools and techniques in the present-day workplace.

These are some ethics which can help all employees, irrespective of their gender, reap equal opportunities and ascend the professional ladder.

(The author is the chief of staff of an agritech start-up)

DeccanHerald Pg.12